ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ) : ಸನ್ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಕಳಸ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲು NRDWP (Natioanl Rural Drinking Water Programme) ಯೋಜನೆಯಡಿಯಲ್ಲಿ ಕಾಮಗಾರಿ ಪೂರ್ಣಗೊಳ್ಳದಿರುವ ಬಗ್ಗೆ ಸರ್ಕಾರ ಈವರೆಗೆ ಏನು ಕ್ರಮ ಕೈಗೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಅಧ್ಯಕ್ಷರು: ಉತ್ತರ ಹೇಳಲು ಸಚಿವರು ಇದ್ದಾರೆಯೇ ? Parliamentary Affairs Minister ಎಲ್ಲಿದ್ದಾರೆ? ಅಲ್ಲಿ ಏನು ನೋಡುತ್ತಿದ್ದೀರಿ ?

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, RDPR Minister ರವರಿಂದ ನಾಳೆ ಉತ್ತರ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ, ಮಾನ್ಯ ಸಚಿವರು ಆಗಲೇ ಇದ್ದರು. ದಯಮಾಡಿ ಅವರನ್ನು ಕರೆಸಬೇಕು. ಕಾಮಗಾರಿ ಅಪೂರ್ಣಗೊಂಡು ಸುಮಾರು 5 ವರ್ಷಗಳಾಗಿದೇ, ಆ ಭಾಗದ ಜನರ ಬಹಳ ದಿನಗಳ ಆಸೆ, ಬೇಡಿಕೆಯನ್ನು ನಾವು ಪೂರ್ಣಗೊಳಿಸುವುದಕ್ಕೆ ಆಗಲಿಲ್ಲ. ಸರ್ಕಾರ ಈಗಲಾದರೂ ಕ್ರಮ ಕೈಗೊಳ್ಳುತ್ತದೆಯೇ ?

ಅಧ್ಯಕ್ಷರು : ಉತ್ತರ ಹೇಳಲು ಏನಾದರೂ ಇದೆಯೇ ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಭಾಧ್ಯಕ್ಷರೆ, ಉತ್ತರ ಕೊಡುವವರು ಯಾರೂ ಇಲ್ಲ, responce ಕೊಡುವವರು ಯಾರೂ ಇಲ್ಲ. ಸರ್ಕಾರ, ಮಂತ್ರಿಗಳು ಏನು ಮಾಡುತ್ತಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ. Calling attention ನಡೆಯುತ್ತಿದೆ. ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವವರು ಯಾರೂ ಇಲ್ಲ. ಬೇರೆ ಸಚಿವರಾದರೂ ಹೇಳಬೇಕಲ್ಲವೆ ?

ಅಧ್ಯಕ್ಷರು : ಸ್ವಲ್ಪ ಇರಿ, ಸಚಿವರು ಬರುತ್ತಾರೇನೋ ನೋಡೋಣ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, RDPR Minister ನ್ನು ದಯಮಾಡಿ ಕರೆಸಿ.

ಅಧ್ಯಕ್ಷರು : ಆಯಿತು, ಶ್ರೀ ಹೆಚ್.ಡಿ. ರೇವಣ್ಣನವರು.

ವಿಷಯ : ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಕಾಚೇನಹಳ್ಳಿ ಏತ ನೀರಾವರಿ ಯೋಜನೆಯು ಕುಂಠಿತಗೊಂಡಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಕಾಚೇನಹಳ್ಳಿ ಏತ ನೀರಾವರಿ ಯೋಜನೆಯು ಕುಂಠಿತಗೊಂಡಿರುವ ಬಗ್ಗೆ ಮಾನ್ಯ ನೀರಾವರಿ ಸಚಿವರ ಗಮನ ಸೆಳೆಯುತ್ತಿದ್ದೇನೆ. ಒಂದು ಏತ ನೀರಾವರಿ ಪ್ರಾರಂಭವಾಗಿ 23 ವರ್ಷಗಳಾಗಿದೆ. 23 ವರ್ಷಗಳಾದರೂ ಪೂರ್ಣಗೊಂಡಿಲ್ಲ.

ಅಧ್ಯಕ್ಷರು : ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು ಈಗ ಸದನದಲ್ಲಿ ಇಲ್ಲ, ಸ್ವಲ್ಪ ತಾಳ್ಮೆ ವಹಿಸಿ, ಚರ್ಚೆ ಮಾಡಬೇಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಸಚಿವರು ಇಲ್ಲ ಎಂದರೆ ನಾನೇನು ಮಾಡುವುದಕ್ಕೆ ಆಗುತ್ತದೆ ಹೇಳಿ. ಒಂದು ಯೋಜನೆ ಪೂರ್ಣಗೊಳಿಸುವುದಕ್ಕೆ 23 ವರ್ಷಗಳು ಬೇಕೇ? ಅರಣ್ಯ ಇಲಾಖೆಯಿಂದ Forest Clearance ತೆಗೆದುಕೊಳ್ಳುವುದಕ್ಕೆ 23 ವರ್ಷ ಬೇಕೇ ?

ಅಧ್ಯಕ್ಷರು : ನೀರಾವರಿ ಸಚಿವರು ಸದನದಲ್ಲಿ ಇಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಅಲ್ಲಿ ಪ್ರತಿ ಹಳ್ಳಿ ರೈತರು ಸರದಿ ಉಪವಾಸ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಬೇಕಂತಲೇ ದುರುದ್ದೇಶದಿಂದ ಮಾಡುತ್ತಿದ್ದಾರೆ.

ಅಧ್ಯಕ್ಷರು : ಮೇಲ್ಮನೆಯಲ್ಲಿ ಇರಬಹುದು, ಬರುತ್ತಾರೆನೋ ನೋಡೋಣ, ಸ್ವಲ್ಪ ತಾಳ್ಮೆ ವಹಿಸಿ. ಶ್ರೀ ಸಿ.ಎನ್. ಬಾಲಕೃಷ್ಣ ಮತ್ತು ಹೆಚ್.ಡಿ.ರೇವಣ್ಣ.

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲವೆಂದರೆ ನಾನು ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ನೀರಾವರಿ ಮಂತ್ರಿಗಳು ಏತಕ್ಕಾಗಿ ಬೇಕು ಎಂದು ಅವರು ಹೇಳಲಿ, ಅರಣ್ಯ ಮಂತ್ರಿಗಳು ಇಲ್ಲಿ ಇರಬಹುದೇನೋ, Forest Clearance ಪಡೆಯುವುದಕ್ಕೆ 23 ವರ್ಷಗಳು ಬೇಕೇ ?

ಅಧ್ಯಕ್ಷರು : ಶ್ರೀ ಸಿ. ಎನ್. ಬಾಲಕೃಷ್ಣ.

ವಿಷಯ : ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ : (ಹೊಳೆನರಸೀಪುರ) ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಹೇಳಿ, ಬಾಲಕೃಷ್ಣರವರ ಗಮನ ಸೆಳೆಯುವ ಸೂಚನೆಗೆ ನಾನು ಸಹ ಸಹಿ ಮಾಡಿದ್ದೇನೆ. ಇದನ್ನು ಆಮೇಲೆ ಹೇಳುತ್ತೇನೆ. ಮೊದಲು ಕಾಚೇನಹಳ್ಳಿಯ ನೀರಾವರಿ ಸೌಲಭ್ಯದ ಬಗ್ಗೆ ಉತ್ತರ ಕೊಡಿಸಿ.

ಅಧ್ಯಕ್ಷರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಸಹ ಸದನದಲ್ಲಿ ಇಲ್ಲವಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇಲ್ಲವೆಂದರೆ ನಾನೇನು ಮಾಡಬೇಕೆಂದು ಹೇಳಿ.

ಅಧ್ಯಕ್ಷರು : ನಾನೇನು ಮಾಡಲಿ ಹೇಳಿ.